ಓ ಎಸ್ .ನಂ.**376/2015**
**ಪಿಡಬ್ಲ್ಯು – 1**

ದಿನಾಂಕ **11-08-2025** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ನಂ.2,3,4 ರ ಪರ ವಕೀಲರವರಿಂದ**

1. ಈ ದಾವೆಯನ್ನು ಪತ್ರಾವಳಿ ಕುಟುಂಬದವರ ಮೇಲೆ ಹಾಕಿರುತ್ತೇನೆ. ಈ ದಾವೆಯನ್ನು ಜಾಗವನ್ನು ಖಾಲಿ ಮಾಡಿಕೊಡಬೇಕು ಎಂದು ಹಾಕಿರುತ್ತೇನೆ. ಈ ದಾವೆಯನ್ನು ಆಸ್ತಿ ನಂ.218/A1/A1/A2 ವಿಸ್ತೀರ್ಣ 287 Sq.Yards ಹಾಗೂ ಸಿಟಿಸಿ ನಂ.218/A1/C2 ವಿಸ್ತೀರ್ಣ 77 Sq.Yards ಇವುಗಳ ಬಗ್ಗೆ ಹಾಕಿರುತ್ತೇನೆ. ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ್ದರಿಂದ ಮಾಲೀಕನಿರುತ್ತೇನೆ. ಹಾಗಾಗಿ ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು ಖಾಲಿ ಮಾಡಲು ದಾವೆ ಹಾಕಿರುತ್ತೇನೆ. ದಾವಾ ಆಸ್ತಿಯನ್ನು ಅಭಿಜಿತ ತೆಂಗಿನ ಕಾಯಿಯವರಿಂದ ಖರೀದಿ ಮಾಡಿರುತ್ತೇನೆ. ಖರೀದಿ ಪತ್ರದಲ್ಲಿ ಕಬ್ಜಾ ಕೊಟ್ಟ ಬಗ್ಗೆ ಬರೆದುಕೊಂಡಿರುತ್ತೇವೆ. ನಾನು ಖರೀದಿ ಮಾಡಿದ ಆಸ್ತಿಯು ಖಾಲಿ ಇರುತ್ತದೆ ಆದರೆ ಸ್ವಲ್ಪ ಆಸ್ತಿಯ ಭಾಗದಲ್ಲಿ ಪ್ರತಿವಾದಿಯರು ಇದ್ದುದರಿಂದ ಖಾಲಿ ಮಾಡಲು ಕೇಳಿಕೊಂಡಿರುತ್ತೇನೆ. ಪ್ರತಿವಾದಿ ನಂ.2 ರಿಂದ 4 ರವರು ಯಾವ ನಾಥೆಯಿಂದ ಕಬ್ಜೆ ಹೊಂದಿದ್ದಾರೆ ಎಂದರೆ ಸಾಕ್ಷಿಯು ಬಾಡಿಗೆದಾರರು ಎಂದು ಇದ್ದಾರೆ ಎಂದು ಹೇಳುತ್ತಾರೆ. ಅಬಿಜಿತ್ ಟೆಂಗಿನಕಾಯಿ ಯವರ ಆಸ್ತಿಯಲ್ಲಿ ಬಾಡಿಗೆದಾರರು ಎಂದು ಈ ಪ್ರತಿವಾದಿಯರು ಇದ್ದರು.

2. ಅಬಿಜತ್ ತೆಂಗಿನಕಾಯಿ ಹಾಗೂ ಪ್ರತಿವಾದಿ ನಂ.2 ರಿಂದ 4 ರವರ ಮಧ್ಯೆ ರಾಜೀ ಆಗಿ 1000 Sq.feet ಜಾಗೆಯನ್ನು ಪ್ರತಿವಾದಿ ನಂ.2 ರಿಂದ 4 ರವರಿಗೆ ಬಿಟ್ಟು ಕೊಡಬೇಕು ಎಂದು ಆಗಿದೆ ಎಂದರೆ ಸಾಕ್ಷಿಯು ನಾನು ಖರೀದಿ ಮಾಡಿದಾಗ ಅದು ನನ್ನ ಗಮನಕ್ಕೆ ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ವಿಷಯ ನನಗೆ

ಗೊತ್ತಿದ್ದರೂ ಸಹ ನಾನು ಅದನ್ನು ಸರಿಪಡಿಸುತ್ತೇನೆ ಎಂದು ಹೇಳಿ ದುರುದ್ದೇಶದಿಂದ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

3. ಎಚ್ ಆರ್ ನಂ. 23/1996 ರಲ್ಲಿ ಅಬಿಜಿತ್ ತೆಂಗಿನಕಾಯಿ ಹಾಗೂ ಜಯಕುಮಾರ ರವರ ಮಧ್ಯೆ ರಾಜೀ ಅಗಿದೆ ಎಂದು ವಾದ ಪತ್ರದಲ್ಲಿ ಬರೆದಿದ್ದೇವೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದು ಕಾಲಪರಿಮಿತಿ ಒಳಗೆ ಇರುವುದಿಲ್ಲ, ಹಾಗೂ ನನಗೆ ಸಂಬಂಧ ಇಲ್ಲ ಎಂದು ಅಬಿಜಿತ ತೆಂಗಿನಕಾಯಿ ನನಗೆ ಹೇಳಿರುತ್ತಾರೆ. ಅಬಿಜಿತ ತೆಂಗಿನಕಾಯಿ ಅವರನ್ನು ಈ ದಾವೆಗೆ ಕಬ್ಜಾ ಕೊಡಿಸುವ ಸಲುವಾಗಿ ಪಕ್ಷಗಾರರನ್ನಾಗಿ ಮಾಡಿಲ್ಲ. ಎಚ್ ಆರ್ ನಂ. 23/1996 ರಲ್ಲಿ ಆಗಿರುವ ರಾಜೀ ಡಿಕ್ರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ನನಗೆ ನೆನಪಿಲ್ಲ. ನಾನು ಸದರಿ ದಾವಾ ಆಸ್ತಿಯು ತಂಟೆ ತಕರಾರು ಇದೆ ಎಂದು ಗೊತ್ತಿದ್ದರೂ ಸಹ ನಾನು ಬಗೆ ಹರಿಸಿಕೊಳ್ಳುತ್ತೇನೆ ಎಂಬ ಉದ್ದೇಶದಿಂದ ಪ್ರತಿವಾದಿ ನಂ.2 ರಿಂದ 4 ರವರ ತಂದೆಗೆ ಬಂದ ಆಸ್ತಿಯನ್ನು ದುರುದ್ದೇಶದಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ಇದೇ ರೀತಿ ನಾನು ಧಾರವಾಡದಲ್ಲಿ ಯಾವುದೇ ಆಸ್ತಿಯನ್ನು ಖರೀದಿ ಮಾಡಿಲ್ಲ. ನಾನು ಧಾರವಾಡದಲ್ಲಿ ಕುಶಾಲ ದೇಶಪಾಂಡೆ ಅವರ ಕಡೆಯಿಂದ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಕರಾರು ಪತ್ರ ಮಾತ್ರ ಆಗಿದೆ ಎಂದು ಹೇಳುತ್ತಾರೆ. ನಾನು ಧಾರವಾಡದಲ್ಲಿ ಈ ರೀತಿ ತಂಟೆ ತಕರಾರು ಇರುವ ಆಸ್ತಿಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಚ್ ಆರ್ ನಂ. 23/1996 ರಲ್ಲಿ ರಾಜೀ ಆಗಿದ್ದರಿಂದ, ಪ್ರತಿವಾದಿ ನಂ.2 ರಿಂದ 4 ರವರ ತಂದೆಗೆ 1000 Sq.feet ಆಸ್ತಿ ಹೋಗಿದ್ದ ಬಗ್ಗೆ ಗೊತ್ತಿದ್ದರೂ ಸಹ ನಾನು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ಪ್ರತಿವಾದಿ ನಂ.2 ರಿಂದ 4 ರವರು 1000 Sq.feet ರಲ್ಲಿ ಕಬ್ಜೆಯಲ್ಲಿ ಇದ್ದಾರೆ ಹಾಗೂ ಅವರಿಗೆ ಖರೀದಿ ಪತ್ರದ ಸಮಯದಲ್ಲಿ ನಾನು ಬೇಟಿ ಆಗಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರಿಂದ 4 ರವರಿಗೆ ಬೇಟಿ ಆಗಿ ಅವರ 1000 Sq.feet ಆಸ್ತಿ

ಬಗ್ಗೆ ಯಾವುದೇ ಖರೀದಿ ಮಾಡುವುದಿಲ್ಲ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ. ಧಾರವಾಡ ಹುಬ್ಬಳ್ಳಿ ವ್ಯಾಪ್ತಿಯಲ್ಲಿ ನಾನು ತಂಟೆ ತಕರಾರು ಇರುವ ಆಸ್ತಿಗಳನ್ನು ಕಡಿಮೆ ಮೌಲ್ಯಕ್ಕೆ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಖರೀದಿ ಪತ್ರ ಪ್ರತಿವಾದಿ ನಂ.2 ರಿಂದ 4 ರವರಿಗೆ ಯಾವುದೇ ರೀತಿ ಬಂಧನಕಾರಿ ಆಗುವುದಿಲ್ಲ ಹಾಗೂ ನನಗೆ ಪ್ರತಿವಾದಿ ನಂ.2 ರಿಂದ 4 ರವರಿಂದ ಕಬ್ಜೆ ಪಡೆಯಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮಾನ್ಯ ನ್ಯಾಯಾಯದಿಂದ ಎಚ್ ಆರ್ ನಂ. 23/1996 ರಲ್ಲಿ ಅಬಿಜಿತ್ ತೆಂಗಿನಕಾಯಿ ಹಾಗೂ ಜಯಕುಮಾರ ರವರ ಮಧ್ಯೆ ಆಗಿರುವ ಆಸ್ತಿಗೆ ನಾನು ಯಾವುದೇ ಹಕ್ಕನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಬೇರೆಯವರಾದ ರಾಹುತ ಮತ್ತು ಆತನ ಸಹೋದರನ ಮೇಲೆ ಸಹ ದಾವೆಯನ್ನು ಹಾಕಿರುತ್ತೇನೆ. ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಸದರಿ ದಾವಾ ಆಸ್ತಿಯು ತಂಟೆ ತಕರಾರು ಇದೆ ಎಂದು ನನಗೆ ಗೊತ್ತಿದ್ದರೂ ಸಹ ಹಾಗೂ ದಾವಾ ಆಸ್ತಿಯಲ್ಲಿ ಇನ್ನುಳಿದ ಪ್ರತಿವಾದಿ ನಂ.5 ಮತ್ತು 6 ರವರು ಕಬ್ಜೆಯಲ್ಲಿ ಇದ್ದರೂ ಸಹ, ಕಾನೂನು ಬಾಹಿರವಾಗಿ ಖರೀದಿ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಪ್ರತಿವಾದಿ ನಂ. 5 ರವರು ಹಾಜರು ಇದ್ದು, ಕಾಲಾವಕಾಶ ಕೋರಿದ್ದರಿಂದ ಕಾಲಾವಾಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.